ಅವರ ಗೌರವಾರ್ಥವಾಗಿ, ಕರ್ನಾಟಕ ಕ್ರಾಫ್ಟ್ ಕೌನ್ಸಿಲ್ 2018ರಲ್ಲಿ 'ಯಕ್ಷ ಸೀರೆ'ಯನ್ನು 5.5 ಮೀಟರ್ ಉದ್ದದಲ್ಲಿ ಮರು ಪರಿಚಯಿಸಲು ಕದಿಕೆ ಟ್ರಸ್ಟ್‌ಗೆ ವಿನಂತಿಸಿತು. ಆರಂಭದಲ್ಲಿ ಈ ಸೀರೆಯನ್ನು ತಾಳಿಪಾಡಿ ಸಹಕಾರ ಸಂಘದಲ್ಲಿ ನೇಯಲಾಗುತ್ತಿತ್ತು. ಪ್ರಸ್ತುತ ಶಿವಳ್ಳಿ ಸಹಕಾರ ಸಂಘದಲ್ಲಿ ಹಿರಿಯ ನೇಕಾರ ಜಾರ್ಜ್ ಅಮ್ಮಣ್ಣ ಹಾಗೂ ಸುರೇಶ್ ಶೆಟ್ಟಿಗಾರ್ ಅವರ ನೇತೃತ್ವದಲ್ಲಿ ನಿಪುಣವಾಗಿ ತಯಾರಿಸಲಾಗುತ್ತಿದೆ. ಜತೆಗೆ, ಬ್ರಹ್ಮಾವರ ನೇಕಾರ ಸಂಘದ ಕೃಷ್ಣ ಶೆಟ್ಟಿಗಾರ್ ಅವರು ಹಲವು ವರ್ಷಗಳಿಂದ ಕಸೆ ಸೀರೆ ನೇಯುವ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ.

### ಉಡುಪಿ ಸೀರೆ ಪರಂಪರೆಗೆ ಪುನಃಶ್ಚೇತನ

ಈ ಸೀರೆಯ ನೇಕಾರಿಕೆಯಲ್ಲಿ ಹಲವು ಕುಶಲ ಹಾಗೂ ಸೂಕ್ಷ್ಮ ತಂತ್ರಗಳಿವೆ. ಈ ವಿಶಿಷ್ಟ ನೇಕಾರಿಕಾ ವಿಧಾನವನ್ನು ಕಿರಿಯ ತಲೆಮಾರಿಗೆ ದಾಟಿಸುವ ಅನಿವಾರ್ಯತೆ ಇರುವುದನ್ನು ಮನಗಂಡ ಕದಿಕೆ ಟ್ರಸ್ಟ್ 2018ರಲ್ಲಿ ಉಡುಪಿ ಸೀರೆ ಪರಂಪರೆಯ ಪುನಃಶ್ಚೇತನ ಕಾರ್ಯ ಆರಂಭಿಸಿತು. ಯುವ ನೇಕಾರರು ಈ ವೃತ್ತಿಯಲ್ಲಿ ತೊಡಗಿಸಿಕೊಳ್ಳದೇ ಇರುವುದನ್ನು ಗಮನಿಸಿ, ಅದಕ್ಕೆ ಒಂದು ಪರಿಹಾರವನ್ನು ಪಡೆಯಬೇಕು ಎಂದು ಆಶಿಸಿತು. ಹಲವು ಹಿರಿಯ ನೇಕಾರರು ತಮ್ಮ ವೃತ್ತಿ ಮೇಲಿನ ಪ್ರೀತಿಯಿಂದ ಕಾಯಕದಲ್ಲಿ ಉಳಿದುಕೊಂಡಿದ್ದರು. ಅವರ ಮಕ್ಕಳಾರೂ ನೇಕಾರಿಕೆ ಕಲಿತಿರಲಿಲ್ಲ. ಕಲಿಸದೇ ಇದ್ದರೆ ಈ ನೇಕಾರಿಕೆಯನ್ನು ಮತ್ತೆಂದೂ ಮುಂದುವರಿಸಲು ಆಗುತ್ತಿರಲಿಲ್ಲ.

ಮಹಾತ್ಮ ಗಾಂಧೀಜಿ ಅವರ ಸಹಕಾರ ಚಳವಳಿಯಿಂದ ಪ್ರೇರಣೆಗೊಂಡು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನೇಕಾರರು ತಮ್ಮದೇ ನೇಕಾರರ ಸಂಘಗಳನ್ನು ಸ್ಥಾಪಿಸಿದರು. ಹೀಗೆ ಸ್ಥಾಪಿಸಿದ ಒಟ್ಟು ಎಂಟು ನೇಕಾರರ ಸಂಘದಲ್ಲಿ ಕೇವಲ ಐದು ನೇಕಾರರ ಸಂಘಗಳು ಮಾತ್ರ ಉಳಿದುಕೊಂಡಿತ್ತು. ತಾಳಿಪಾಡಿ ನೇಕಾರರ ಸಂಘವನ್ನು ಕೇಂದ್ರವಾಗಿಟ್ಟುಕೊಂಡು ಉಡುಪಿ ಸೀರೆ ನೇಕಾರಿಕೆಯ ಉಳಿವಿಗಾಗಿ ಕದಿಕೆ ಟ್ರಸ್ಟ್ ಕೆಲಸ ಆರಂಭಿಸಿತು. ಆಗ ತಾಳಿಪಾಡಿ ನೇಕಾರರ ಸಂಘದಲ್ಲಿ ಇದ್ದ ಒಟ್ಟು ನೇಕಾರರ ಸಂಖ್ಯೆ ಎಂಟು.

### ಸವಾಲಿನ ಕಾರ್ಯ

ಉಡುಪಿ ಸೀರೆ ಪರಂಪರೆಯನ್ನು ಪುನಃಶ್ಚೇತನಗೊಳಿಸುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಯುವ ಸಮೂಹವನ್ನು ನೇಕಾರಿಕೆಯತ್ತ ತರುವುದು ಸಣ್ಣ ಮಾತಾಗಿರಲಿಲ್ಲ. ಈ ಸೀರೆಗಳಿಗೆ ಯೋಗ್ಯ ಬೆಲೆಯನ್ನು ನೀಡಿ, ಮಾರುಕಟ್ಟೆ ಒದಗಿಸುವುದು, ನೇಕಾರರಿಗೆ ಉತ್ತಮ ಸಂಭಾವನೆ, ನೇಕಾರಿಕೆಗೆ ಅಗತ್ಯವಿರುವ ಮೂಲ ಸೌಕರ್ಯ, ಸಂಪಾದನೆ ಹೀಗೆ ಹಲವು ಸವಾಲುಗಳನ್ನು ನೀಗಿಕೊಂಡು ಉಡುಪಿ ಸೀರೆ ವಿನೂತನವಾಗಿ ಜನರ ಮನಸ್ಸನ್ನು ಸೆಳೆಯುತ್ತಿದೆ.

ಉಡುಪಿ ಸೀರೆಗೆ ಬ್ರ್ಯಾಂಡ್ ಮೌಲ್ಯ ನೀಡಲು ಟ್ರಸ್ಟ್ ಚಂದದ ಲೋಗೊ ಮತ್ತು ಲೇಬಲ್ ಅನ್ನು ರಚಿಸಲಾಯಿತು. ಲೇಬಲ್‌ನಲ್ಲಿ ನೇಕಾರರ ಚಿತ್ರವನ್ನು ಮುದ್ರಿಸಿ ಸೀರೆ ನೇಯುವ ಕೈಗಳನ್ನು ಪರಿಚಯಿಸಲಾಯಿತು. ಈ ಮಾದರಿಗೆ ಉತ್ತಮ ಪ್ರತಿಕ್ರಿಯೆ ದೊರತಿದೆ. ಸದ್ಯಕ್ಕೆ ಉಡುಪಿ ಸೀರೆಗೆ ಉತ್ತಮ ಬೇಡಿಕೆ ಇದೆ. ಕಿನ್ನಿಗೋಳಿಯ ತಾಳಿಪಾಡಿ ನೇಕಾರರ ಸಂಘ ಮತ್ತು ಉಡುಪಿಯಲ್ಲಿರುವ ಉಡುಪಿ ನೇಕಾರರ ಸಂಘಗಳಲ್ಲಿ ಈ ಸೀರೆಗಳನ್ನು ನೇರವಾಗಿ ಖರೀದಿಸಬಹುದು.



ಮಮತಾ ರೈ

ಈ ಬಗ್ಗೆ ಕದಿಕೆ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷೆ ಮಮತಾ ರೈ ಹೇಳುವಂತೆ, 'ಉಡುಪಿ ಸೀರೆಯನ್ನು ಇನ್ನಷ್ಟು ಪರಿಸರಸ್ನೇಹಿಯಾಗಿಸಲು ಸಹಜ ಬಣ್ಣದ ಉಡುಪಿ ಸೀರೆಗಳನ್ನು ಪರಿಚಯಿಸಿದ್ದೇವೆ. ಅಡಿಕೆ ಚೊಗರು, ಮಂಜಿಷ್ಟ, ಚೆಂಡುಹೂವು, ಇಂಡಿಗೋ ಇತ್ಯಾದಿಗಳನ್ನು ನೈಸರ್ಗಿಕ ಬಣ್ಣವಾಗಿ ಬಳಸಿ ಉಡುಪಿ ಸೀರೆಗಳನ್ನು ನೇಯಲಾಗುತ್ತಿದೆ. ಈ ಸೀರೆಗಳಿಗೆ ಒಳ್ಳೆಯ ಬೇಡಿಕೆ ಇದೆ. ಈಗ ಬಿಳಿ ಬಣ್ಣದ ಸೀರೆಗೆ, ಕೆಂಪು ಅಂಚಿರುವ ಹೊಸದೊಂದು ವಿಶೇಷ ಸೀರೆಯನ್ನು ತಯಾರಿಸುತ್ತಿದ್ದೇವೆ. ಕೆಂಪು ಬಣ್ಣದ ನೂಲನ್ನು ಮಂಜಿಷ್ಟದ ಬೇರು ಬಳಸಿ 'ಟರ್ಕಿ ರೆಡ್ ಡೈ' ಸಾಂಪ್ರದಾಯಿಕ ಶೈಲಿಯ ಜೊತೆಗೆ ವೈಜ್ಞಾನಿಕ ವಿಧಾನ ಬಳಸಿ ನಾನೇ ತಯಾರಿಸಿದ್ದೇನೆ. ಬಣ್ಣ ತಯಾರಿಕೆ ಪ್ರಕ್ರಿಯೆಗೆ ಸುಮಾರು ಒಂದು ತಿಂಗಳು ತೆಗೆದುಕೊಳ್ಳಲಾಗಿದೆ. ಕದಿಕೆ ಟ್ರಸ್ಟ್ ಮೂಲಕ ಆರಂಭ ಮಾಡಿದ ಉಡುಪಿ ಸೀರೆ ಪರಂಪರೆಯ ಪುನಃಶ್ಚೇತನದ ಕೆಲಸ ಯಶಸ್ವಿಯಾಗಿದೆ. ಇನ್ನು ಉಳಿಸಿಕೊಳ್ಳಲು ಎಲ್ಲರೂ ಬೆಂಬಲ ನೀಡಬೇಕಾಗಿದೆ.



ಚಿತ್ರಕೃಪೆ: ಕದಿಕೆ ಟ್ರಸ್ಟ್

## ಸೀರೆಯ ವೈಶಿಷ್ಯ

- ಸೀರೆಗಳ ಪಲ್ಲು ಮತ್ತು ಅಂಚುಗಳಿಗೆ ಗಾಢ ಬಣ್ಣಗಳನ್ನು ಬಳಸಲಾಗುತ್ತದೆ. ಉಳಿದ ಭಾಗಕ್ಕೆ ತಿಳಿ ಬಣ್ಣ ಹಾಕಲಾಗುತ್ತದೆ.
- ನೇಯುವ ಮೊದಲು ಸಂಪೂರ್ಣ ವಾರ್ಪ್‌ನ ಪಲ್ಲು ಭಾಗವನ್ನು ಟೈ–ಡೈ ವಿಧಾನದಲ್ಲಿ ಗಾಢ ಬಣ್ಣ ಹಾಕಲಾಗುತ್ತದೆ.
- ನೇಯುವ ಪ್ರಕ್ರಿಯೆಯಲ್ಲೇ ನೂಲಿಗೆ ಗಂಜಿ ಹಚ್ಚುವ (ಲುಮ್ ಸೈಸಿಂಗ್) ತಂತ್ರವನ್ನು ಬಳಸಲಾಗುತ್ತದೆ.
- ಚೌಕಟ್ಟು ಸೀರೆಗಳನ್ನು ನೇಯುವಾಗ ಕಟ್–ಬಾರ್ಡರ್ ತಂತ್ರವನ್ನು ಉಪಯೋಗಿಸಲಾಗುತ್ತದೆ.
- ವಿನ್ಯಾಸಗಳನ್ನು ಹೆಚ್ಚುವರಿ ವಾರ್ಪ್ ತಂತ್ರದ ಮೂಲಕ ಕೈಯಿಂದಲೇ ನೇಯಲಾಗುತ್ತದೆ.
- ಉಡುಪಿ ಸೀರೆಗಳನ್ನು ನೇಯಲು ಮಲಬಾರ್ ಫ್ರೇಮ್ ಲೂಮ್ ಅನ್ನು ಬಳಸಲಾಗುತ್ತದೆ.



ಏ. 23ರ ಸಂಚಿಕೆಯ ಚೆನ್ನುಡಿ **'ನಮ್ಮೂರ ಭಾಷಿಯೂ ವಿಶಿಷ್ಟ ಹವಾಮಾನವೂ'** ಕೇಳಿ, ಬಿ. ಶೋಭಾ ಅರಸ ಅವರ ಧ್ವನಿಯಲ್ಲಿ...

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ